ದಿ: 13.12.2012 ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಶ್ರೀ ದೊಡ್ಡನಗೌಡ ಜಿ. ಪಾಟೀಲ್ : ನಿಯಮ 69ರಲ್ಲಿ ಚರ್ಚೆಯಿದೆ.

ಅಧ್ಯಕ್ಷರು : ಆಮೇಲೆ ಸಮಯ ಕೊಡುತ್ತೇನೆ.

11. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

1. ವಿಷಯ : ಪುತ್ತೂರ ತಾಲ್ಲೂಕಿನಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆ ಬಗ್ಗೆ.

ಶ್ರೀಮತಿ ಮಲ್ಲಿಕಾ ಪ್ರಸಾದ್ (ಪುತ್ತೂರು) : ಪುತ್ತೂರು ತಾಲ್ಲೂಕಿನ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಸಾಮಾನ್ಯವಾಗಿ ರೈತರು ಎದುರಿಸುವಂತಹ ಎರಡು ಬರ್ನಿಂಗ್ issues ತಮ್ಮ ಮುಂದೆ ಹೇಳಬಯಸುತ್ತೇನೆ. ವಿಷಯವೇನೆಂದರೆ, ಭೂ ಮಂಜೂರಾತಿ ಪ್ಲಾಟಿಂಗ್‌ನ ಒಂದರಿಂದ ಐದವರೆಗಿನ ಪದ್ಧತಿಯ ಕಡತವನ್ನು ರುದ್ದಗೊಳಿಸಿ ಏಕ ವ್ಯಕ್ತಿ ಸುತ್ತೋಲೆ ಹೊರಡಿಸುವ ಬಗ್ಗೆ. ಪುತ್ತೂರು ತಾಲ್ಲೂಕಿನ ವಿವಿಧ ಹಂತಗಳಲ್ಲಿ ರೈತರಿಗೆ ಭೂ ಮಂಜೂರಾತಿ ಅಕ್ರಮ ಸಕ್ರಮದಡಿ ಮಂಜೂರಾದ ಪ್ರಕರಣಗಳು ಸೇರಿದಂತೆ ಪ್ಲಾಟಿಂಗ್ ಆಗಲು, ದುರಸ್ತಿ ಪಡಿಸಲು 7,000 ಕಡತಗಳು ಇನ್ನೂ ಬಾಕಿಯಿರುವುದಾಗಿ ನನ್ನ ಗಮನಕ್ಕೆ ಬಂದಿರುತ್ತದೆ. ಸರ್ಕಾರದ ಇತ್ತೀಚಿನ ಸುತ್ತೋಲೆಯ ಆದೇಶದ ಪ್ರಕಾರ ಪ್ಲಾಟಿಂಗ್ ಮಾಡಲು ಈ ಸರ್ವೆ ನಂಬರ್‌ನಲ್ಲಿ ಮಂಜೂರಾದ ಎಲ್ಲಾ ಕಡತಗಳು ನಮೂನೆ 1 ರಿಂದ 5 ರವರೆಗಿನ ಎಲ್ಲಾ ಮಾಹಿತಿಗಳನ್ನು ತಯಾರಿಸಿ ಅನುಮೋದನೆ ಪಡೆದು ಕೊಂಡು ಆ ನಂತರ ಪ್ಲಾಟಿಂಗ್ ಮಾಡಬೇಕಾಗುತ್ತದೆ. ಬಹುಶಃ ಕಳೆದೆರೆಡು ವರ್ಷಗಳಿಂದ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಮಂಜೂರಾದ ಪ್ರಕರಣಗಳು ಪ್ಲಾಟಿಂಗ್ ಆಗಿರುವುದು ಕಂಡು ಬಂದಿರುವುದಿಲ್ಲ. ಕಾರಣ ನನ್ನ ಕ್ಷೇತ್ರದಲ್ಲಿ ಒಂದು ಸರ್ವೆ ನಂಬರ್‌ನಲ್ಲಿ 30 ರಿಂದ 100 ಕ್ಕೂ ಹೆಚ್ಚು ಮೇಲ್ಪಟ್ಟು ಖಾತೆದಾರರಾಗಿದ್ದಾಗ, ಈ ಎಲ್ಲಾ ಖಾತೆಗಳನ್ನು ಸೇರಿಸಿಕೊಂಡು ಪ್ಲಾಟಿಂಗ್ ಮಾಡಲು ಸಾಧ್ಯವಾಗುತ್ತಿಲ್ಲ. ಇದರಿಂದ ರೈತರಿಗೆ ಜಮೀನಿನ ಮೇಲೆ

ವ್ಯವಹರಣೆ ಮಾಡಲು ತುಂಬಾ ಅನಾನುಕೂಲವಾಗುತ್ತಿದೆ. ಆದ್ದರಿಂದ ಈ ವಿಧಾನಸಭಾ ಕ್ಷೇತ್ರದ ಸುತ್ತೋಲೆ ಕ್ರಮವನ್ನು ತಾವು ಬದಲಿಸಿ ಏಕ ವ್ಯಕ್ತಿ ಪ್ರಕರಣದಲ್ಲಿ ಪ್ಲಾಟಿಂಗ್ ಮಾಡಲು ಆದೇಶ ನೀಡಬೇಕೆಂದು ತಮ್ಮಲ್ಲಿ ಕೋರುತ್ತೇನೆ. ಸಂಬಂಧಪಟ್ಟ ಸಚಿವರು ತನ್ಮೂಲಕ ಒಂದು ಆದೇಶವನ್ನು ಹೊರಡಿಸಬೇಕಾಗಿದೆ ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಅಧ್ಯಕ್ಷರೆ, ರೈತರು ಪಡುವಂಥ ಇನ್ನೊಂದು ದೊಡ್ಡ ಕಷ್ಟದ ವಿಷಯವೇನೆಂದರೆ deemed forest. ಅಂದರೆ, ಅರಣ್ಯ ಇಲಾಖೆಯಲ್ಲಿ ತಯಾರು ಮಾಡಿದ ಪಟ್ಟಿಯನ್ನು ಮಾರ್ಪಡಿಸಿ ರೈತರ ಅಕ್ರಮ ಸಕ್ರಮ ಕಡತಗಳನ್ನು ಸಮಿತಿಯಲ್ಲಿ ತೀರ್ಮಾನ ಮಾಡುವ ಬಗ್ಗೆ ಇರುವಂಥ ವಿಷಯ. ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಅಕ್ರಮ ಸಕ್ರಮ ಕಡತಗಳನ್ನು ನಾನು setting ಮಾಡುತ್ತಿದ್ದೇನೆ. ಬಹುಶಃ ಈ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಸುಮಾರು 9,000 ಮೇಲ್ಪಟ್ಟು ಅರ್ಜಿಗಳು ವಿಲೇವಾರಿಗೆ ಬಾಕಿ ಇದ್ದು, ಈ ಪ್ರಕರಣಗಳನ್ನು ಪರಿಶೀಲಿಸಲಾಗಿ, ಕೆಲವೊಂದು ಸರ್ವೆ ನಂಬರುಗಳಲ್ಲಿ deemed forestನ ವ್ಯಾಪ್ತಿಲ್ಲಿ ಬರುತ್ತವೆ. ಅಕ್ರಮ ಸಕ್ರಮ ಯೋಜನೆಯಲ್ಲಿ 1991ರಲ್ಲಿ ನಮೂನೆ–50ರಲ್ಲಿಯೂ, 1998ರಲ್ಲಿ ನಮೂನೆ–53ರಲ್ಲಿ ಅರ್ಜಿ ಸಲ್ಲಿಸಿರುವಂಥ ಪ್ರಕರಣಗಳು ಇರುತ್ತವೆ. Deemed forest ಎಂಬುದು ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಇಲಾಖೆಯು ತಯಾರು ಮಾಡಿದ ಪಟ್ಟಿಯಾಗಿರುತ್ತದೆ. ಇವರು ಈ ಪಟ್ಟಿಯನ್ನು ತಯಾರು ಮಾಡಿದಾಗ ಅಕ್ರಮ ಸಕ್ರಮ ಯೋಜನೆಯಡಿ ಬಾಕಿಯಿರುವ ಅರ್ಜಿಗಳನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ. Deemed forest ಎಂಬ ಪದಗಳಲ್ಲಿ ಬರುವ ರೈತರು ಅಕ್ರಮ ಸಕ್ರಮ ಮಾಡಿ ಪಡೆಯುವಲ್ಲಿ ಅರ್ಹರಿದ್ದಂತ ಹವರಿಗೆ ಸಮಿತಿಯು ತೀರ್ಮಾನ ಮಾಡಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಬಾಕಿ ಇರುವ ಅರ್ಜಿಗಳನ್ನು ತೀರ್ಮಾನಿಸಲು Deemed forest ಎಂಬುದನ್ನು ಮಾರ್ಪಡಿಸಿ ಆದೇಶ ನೀಡಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ,

ತಾವು ದಯವಿಟ್ಟು ಇದನ್ನು ಗಂಭೀರ ವಿಷಯವನ್ನಾಗಿ ಪರಿಗಣಿಸಿ ತಮ್ಮ ಮೂಲಕ ಈ ಕೆಲಸವನ್ನು ಮಾಡಿಸಿಕೊಡಬೇಕೆಂದು ನನ್ನ ವಿನಂತಿ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) (ಉಪ ಮುಖ್ಯ ಮಂತ್ರಿ ಹಾಗೂ ಕಂದಾಯ ಸಚಿವರ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವಂಥ ವಿಷಯ ಕಂದಾಯ ಇಲಾಖೆಗೆ ಸಂಬಂಧಿಸಿರುವಂಥ ವಿಚಾರದಲ್ಲಿ entry ಮಾಡುವ ಸಲುವಾಗಿ ಆಗಿರುವ ತೊಂದರೆಗಳನ್ನು ಗಮನಕ್ಕೆ ತರುವ ಕೆಲಸವನ್ನು ಮಾಡುತ್ತೇನೆ. ಎರಡನೆಯ ವಿಚಾರದಲ್ಲಿ deemed forest ಎಂದು ಇದ್ದುದ್ದನ್ನು ಬದಲಾಯಿಸಬೇಕು ಎನ್ನುವ ವಿಚಾರದಲ್ಲಿ ಬಹುಶಃ ಕೇಂದ್ರ ಸರ್ಕಾರವನ್ನು ಸಂಪರ್ಕಿಸಿ ಮಾಡಬೇಕಾಗಿರುವಂಥ ಕೆಲಸವೆಂದು ನಾನು ಭಾವಿಸುತ್ತೇನೆ. ಸನ್ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಅದಕ್ಕೆ ಪೂರಕವಾಗಿ ಚಿಂತನೆ ಮಾಡಬೇಕಾಗುತ್ತದೆ.

2. ವಿಷಯ : ಸದಾಶಿವ ಆಯೋಗದ ಮನವಿಯನ್ನು ಸರ್ಕಾರಕ್ಕೆ ಅರ್ಪಿಸಲು ಬಂದಂಥ ಜನರ ಮೇಲೆ ನಡೆದ ಲಾಠಿ ಚಾರ್ಜ್‌ನಿಂದಾಗಿ ಅನೇಕ ಜನರು ಗಂಭೀರವಾಗಿ ಗಾಯಗೊಂಡಿರುವ ಬಗ್ಗೆ ಹಾಗೂ ಈ ಸಂಬಂಧ ಸದರಿ ಜನರ ಮೇಲೆ ಹಾಕಲಾಗಿರುವ ಪೊಲೀಸ್ ಕೇಸ್‌ಗಳನ್ನು ಹಿಂತೆಗೆದುಕೊಳ್ಳುವ ಕುರಿತು.

ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ–ಧಾರವಾಡ (ಪೂರ್ವ)) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿರುವುದಕ್ಕಾಗಿ ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ, ಮೊನ್ನೆ ನಡೆದಂಥ ಸದಾಶಿವ ಆಯೋಗದ ಮನವಿಯನ್ನು ಸರ್ಕಾರಕ್ಕೆ ಅರ್ಪಿಸಲು ಜನರು ಬಂದ ಸಂದರ್ಭದಲ್ಲಿ ತುಂಬಾ ಲಾಠಿ ಚಾರ್ಜ್ ಮಾಡಿದ್ದರಿಂದ ಮತ್ತು Tear Gas ನಿಂದ ಒಟ್ಟು 27 ಜನ ಗಾಯಗೊಂಡಿದ್ದಾರೆ. ಅದರಲ್ಲಿ 10 ಜನ ಗಂಭೀರವಾಗಿ ಗಾಯಗೊಂಡಿದ್ದಾರೆ. ಕೆಲವರು ಕೈ–ಕಾಲು ಮುರಿದು ಕೊಂಡಿದ್ದಾರೆ, ಕೆಲವರು ಆಸ್ಪತ್ರೆಯಲ್ಲಿದ್ದಾರೆ. ಅವರು ಡಾ: ಅಂಬೇಡ್ಕರ್ ಪುತ್ಥಳಿಗೆ ಮತ್ತು ರಾಣಿ ಚೆನ್ನಮ್ಮ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಸರ್ಕಾರಕ್ಕೆ